ಜಾಗಕ್ಕೆ ಕರೆದುಕೊಂಡು ಹೋಗು" ಎಂದಳು.

ಪುಟ್ಟಿಗೆ ಅವಳ ಅಭಿಪ್ರಾಯ ಅರ್ಥವಾಗಲಿಲ್ಲ. ಅವಳು ಚಿಕ್ಕಮ್ಮನ ಕೈ ಹಿಡಿದು ಎಂಜಲು ಎಲೆಗಳ ಮುಂದೆ ಕೂರಿಸಿದಳು. ದೈನ್ಯ, ಹಸಿವಿನಿಂದ ಕಂಗೆಟ್ಟಿದ್ದ, ಅಜ್ಞಾನದ ಆ ಮುದುಕಿ ಎಲೆಗಳಿಂದ ಪೂರಿಯ ಚೂರುಗಳನ್ನು ಆರಿಸಿ ಆರಿಸಿ ತಿನ್ನತೊಡಗಿದಳು. ಅಬ್ಬ! ಮೊಸರು ಎಷ್ಟು ರುಚಿಯಾಗಿತ್ತು. ಕರ್ಜಿಕಾಯಿ ಎಷ್ಟು ಮಧುರವಾಗಿ, ಮೃದುವಾಗಿದೆ? ಚಿಕ್ಕಮ್ಮ ಬುದ್ಧಿಹೀನಳಾಗಿದ್ದಳು. ಆದರೆ ವೃದ್ಧಾಪ್ಯ ಆಸೆರೋಗದ ಅಂತಿಮಗಳಿಗೆ... ಎಲ್ಲ ಆಸೆಗಳೂ ಒಂದರಲ್ಲಿ ಕೇಂದ್ರೀಕೃತವಾಗಿ ಬಿಡುತ್ತದೆ. ಮುದಿಚಿಕ್ಕಮ್ಮ ಆ ಆಸೆಯ ಕೇಂದ್ರ ಸ್ವಾದೇಂದ್ರಿಯವಾಗಿತ್ತು.

ಅದೇ ಸಮಯಕ್ಕೆ ಸರಿಯಾಗಿ ರೂಪಳಿಗೆ ಎಚ್ಚರವಾಯಿತು. ಪುಟ್ಟಿ ತನ್ನ ಹತ್ತಿರವಿಲ್ಲ ಎಂದು ತಿಳಿಯಿತು. ಅವಳು ಮಂಚದ ಕೆಳಗೆ ಬಿದ್ದಿದ್ದಾಳೆಂದು ಆ ಕಡೆ ಈ ಕಡೆ ತಡಕಿದಳು. ಅಲ್ಲೆಲ್ಲೂ ಇಲ್ಲದಿದ್ದಾಗ ಎದ್ದು ಕುಳಿತು, ನೋಡಿದಳು! ಪುಟ್ಟಿ ಎಂಜಲೆಲೆಯ ಮುಂದೆ ಸುಮ್ಮನೆ ನಿಂತಿದ್ದಾಳೆ! ಮುದಿಚಿಕ್ಕಮ್ಮ ಎಂಜಲೆಲೆಯಿಂದ ಪೂರಿ ಚೂರುಗಳನ್ನು ಆಯ್ದುಕೊಂಡು ತಿನ್ನುತ್ತಿದ್ದಾಳೆ! ರೂಪ ಸ್ತಬ್ಧಗೊಂಡಳು. ಹಸುವಿನ ಕುತ್ತಿಗೆಗೆ ಚಾಕು ಹಾಕುತ್ತಿರುವುದನ್ನು ನೋಡಿದಾಗ ಆಗುವಂತಹ ಅನುಭವವಾಯಿತು ರೂಪಳಿಗೆ. ಪೂರಿಗಾಗಿ ತನ್ನ ಚಿಕ್ಕಮ್ಮ ಎಷ್ಟು ಹೇಯ ಕೆಲಸವನ್ನು ಮಾಡುತ್ತಿದ್ದಾಳೆ! ಒಬ್ಬ ಬ್ರಾಹ್ಮಣ ಹೆಂಗಸು ಇನ್ನೊಬ್ಬರ ಎಂಜಲೆಲೆ ನೆಕ್ಕುತ್ತಿದ್ದಾಳೆ! ಇದಕ್ಕಿಂತ ಶೋಚನೀಯ ಸ್ಥಿತಿ ಬೇಕೆ? ಈ ದೃಶ್ಯ ನೋಡಿದವರ ಹೃದಯ ಕಂಪಿಸುತ್ತಿತ್ತು! ಭೂಮಿ ನಿಂತು ಆಕಾಶ ತಿರುಗಿದಂತಾಯಿತು. ಪ್ರಪಂಚಕ್ಕೆ ಖಂಡಿತ ಏನೋ ಆಪತ್ತು ಬರಲಿದೆ. ರೂಪಳಿಗೆ ಕೋಪ ಬರಲಿಲ್ಲ. ದುಃಖದ ಸಮಯದಲ್ಲಿ ಕೋಪವೆಲ್ಲಿ? ಕರುಣೆ ಮತ್ತು ಭಯದಿಂದ ಕಣ್ಣೀರು ತುಂಬಿ ಬಂತು. ಈ ಅಧರ್ಮದ ಪಾಪಕ್ಕೆ ಹೊಣೆ ಯಾರು? ಅವಳು ನಿರ್ಮಲ ಮನಸ್ಸಿನಿಂದ ಆಕಾಶದ ಕಡೆಗೆ ಕೈ ಎತ್ತಿ, "ಪರಮಾತ್ಮಾ ನನ್ನ ಮಕ್ಕಳ ಮೇಲೆ ಕೃಪೆ ತೋರು. ಈ ಅಧರ್ಮದ ದಂಡ ನನಗೆ ಕೊಡಬೇಡ. ಹಾಗೇನಾದರೂ ಆದಲ್ಲಿ ನನ್ನ ಸರ್ವನಾಶವಾಗಿಬಿಡುತ್ತದೆ" ಎಂದು ಕೇಳಿಕೊಂಡಳು.

ತನ್ನ ಸ್ವಾರ್ಥ ಮತ್ತು ಈ ಅನ್ಯಾಯವನ್ನು ಹೀಗೆ ಪ್ರತ್ಯಕ್ಷವಾಗಿ ನೋಡುವ ಅವಕಾಶ ಅವಳಿಗೆ ದೊರೆತಿರಲಿಲ್ಲ. "ಅಯ್ಯೊ! ನಾನೆಂಥ ನಿರ್ದಯಿ! ಯಾರ ಆಸ್ತಿಯಿಂದ ವರ್ಷಕ್ಕೆ ಇನ್ನೂರು ರೂಪಾಯಿ ಆದಾಯ ಬರುತ್ತಿದೆಯೋ ಅವರಿಗೇ ಇಂಥ ದುರ್ಗತಿ! ಅದೂ ನನ್ನಿಂದ! ದಯಾಮಯನಾದ ಭಗವಂತಾ! ನನ್ನಿಂದ ತುಂಬಾ ತಪ್ಪಾಯಿತು. ನನ್ನನ್ನು ಕ್ಷಮಿಸು. ಇಂದು ನನ್ನ ಮಗನ ಹುಟ್ಟಿದ ಹಬ್ಬ. ನೂರಾರು ಜನ ಊಟ ಮಾಡಿದರು. ಅವರೆಲ್ಲ ಹೇಳಿದಂತೆಯೆ ನಾನು ಅವರ ದಾಸಿಯಂತೆ ನಡೆದುಕೊಂಡೆ. ನನ್ನ 'ಹೆಸರಿ'ಗಾಗಿ ನೂರಾರು ರೂಪಾಯಿ ಖರ್ಚು ಮಾಡಿದೆ. ಆದರೆ ಯಾರಿಂದ ಸಾವಿರಾರು ರೂಪಾಯಿ ತಿನ್ನುತ್ತಿದ್ದೇನೆಯೋ ಅವರಿಗೇ ಈ ಸಮಾರಂಭದಲ್ಲಿ ಹೊಟ್ಟೆ ತುಂಬಾ ಊಟ ಹಾಕಲಿಲ್ಲ. ಕಾರಣವಾದರೂ ಏನು? ಕೇವಲ ಇಷ್ಟೆ. ಅವಳು ಮುದುಕಿ, ನಿಸ್ಸಹಾಯಕಳು.

ರೂಪ ದೀಪ ಹೊತ್ತಿಸಿದಳು. ಉಗ್ರಾಣದ ಬಾಗಿಲು ತೆಗೆದಳು. ಒಂದು ತಟ್ಟೆಯಲ್ಲಿ ಎಲ್ಲ ಭಕ್ಷ್ಯಗಳನ್ನೂ ಇಟ್ಟುಕೊಂಡು ಮುದಿಚಿಕ್ಕಮ್ಮನ ಹತ್ತಿರಕ್ಕೆ ಹೋದಳು.

ಅರ್ಧ ರಾತ್ರಿಯಾಗಿತ್ತು. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿದ್ದವು. ಅದರ ಮೇಲೆ ಕುಳಿತು ಸ್ವರ್ಗ ಸುಖವನ್ನು ಅನುಭವಿಸುತ್ತಿದ್ದ ದೇವತೆಗಳಿಗೂ ಸಹ, ಮುದಿಚಿಕ್ಕಮ್ಮನಿಗೆ ತಟ್ಟೆಯನ್ನು